**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.**

ಸಿಸಿ ನಂ. 165/2022

ಡಿಡಬ್ಲೂ : 1

| | | |
|---|---|---|
| ಹೆಸರು | : | ಶ್ರೀ ರಾಜೇಶ |
| ತಂದೆಯ ಹೆಸರು | : | ಶಾಂತಾರಾಮ ನಾಯ್ಕ |
| ವರ್ಷ | : | 42 ವರ್ಷ |
| ಉದ್ಯೋಗ | : | ಕೆ ಎಸ್ ಆರ್ ಟಿ ಸಿ ಕಂಡಕ್ಟರ |
| ವಾಸ್ತವ್ಯ | : | ಅಂಕೋಲಾ |

ಸತ್ಯ ಪ್ರತಿಜ್ಞೆಯ ಮೇರೆಗೆ : ದಿನಾಂಕ 12-02-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಆರೋಪಿ ಪರವಾಗಿ : ಶ್ರೀ ಆರ್ ಜಿ ಎನ್ ವಕೀಲರಿಂದ :**

ನನ್ನ ತಾಯಿ ಭಟ್ಕಳ ಪಿ ಎಲ್ ಡಿ ಬ್ಯಾಂಕನಲ್ಲಿ ಸಾಲವನ್ನು ಪಡೆದುಕೊಂಡಿದ್ದರು . ಅದಕ್ಕೆ ನಾನೇ ಚೆಕ್ ನ್ನು ಕೊಟ್ಟಿದ್ದೆನು . ಚೆಕ್ ನಲ್ಲಿ 2,65,000/- ರೂಪಾಯಿ ಎಂದು ಬರೆದುಕೊಟ್ಟಿದ್ದೆ . ನನ್ನ ಸ್ಯಾಲರಿ ಖಾತೆಯಲ್ಲಿ ರೂ. 1,94,000/- ಕಡಿತಗೊಂಡಿದೆ . ಚೆಕ್ ನ ಪ್ರಕಾರ ರೂ. 71,000/- ರೂಪಾಯಿ ಬಾಕಿ ಇದೆ . ನಾನು ಬಾಕಿ 71,000/- ರೂಪಾಯಿ ಕಟ್ಟಲು ತಯಾರಿದ್ದೇನೆ . ಕಾರಣ ನನ್ನನ್ನು ಈ ಪ್ರಕರಣದಿಂದ ಬಿಡುಗಡೆಗೊಳಿಸಬೇಕಾಗಿ ಕೇಳಿಕೊಳ್ಳುತ್ತೇನೆ .

**ಪಾಟೀ ಸವಾಲು : ಫಿರ್ಯಾದುದಾರರ ಪರವಾಗಿ : ಶ್ರೀ ಕೆ ಆರ್ ಎನ್ ವಕೀಲರಿಂದ :**

2. ನಾನು ಕೆ ಎಸ್ ಆರ್ ಟಿ ಸಿಯಲ್ಲಿ ಡ್ರೈವರ್ ಕಮ್ ಕಂಡಕ್ಟರ ಆಗಿ ಕೆಲಸ ಮಾಡುತ್ತಿದ್ದೇನೆ . ನಾನು ಬಿ.ಎ ಪದವೀಧರ . ನಾನು 2009 ರಿಂದ ಕಾರವಾರ ಡಿಪೋನಲ್ಲಿ ಕೆಲಸ ಮಾಡುತ್ತಿದ್ದೇನೆ . ಶಾರದಾ

ಶಾಂತಾರಾಮ ನಾಯ್ಕ ನನ್ನ ತಾಯಿ . ಮುಕುಂದ ಯಾರು ಗೊತ್ತಿಲ್ಲ. ನನ್ನ ತಾಯಿ ಫಿರ್ಯಾದಿ ಬ್ಯಾಂಕಿನಲ್ಲಿ ಎಷ್ಟು ಸಾಲ ಪಡೆದಿದ್ದರು ಗೊತ್ತಿಲ್ಲ . ಸಾಲದ ದಾಖಲಾತಿಗಳಲ್ಲಿ ನಾನು , ನನ್ನ ತಾಯಿ ಹಾಗೂ ರಾಜೇಶ ಮುಕುಂದ ನಾಯ್ಕ ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿ ನನಗೆ ಚೆಕ್ ನ ಮೇಲೆ ಸಹಿ ಮಾಡು ಎಂದಿದ್ದರು ನಾನು ಚೆಕ್ ಗೆ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ . ಸಾಲದ ಅರ್ಜಿಯಲ್ಲಿ ನನ್ನ ಹಾಗೂ ನನ್ನ ತಾಯಿಯ ಪೋಟೋ ಹಾಗುಾ ಸಹಿ ಇದೆ ಎಂದರೆ ಸರಿ . ಸಾಕ್ಷಿ ಸಾಲದ ಅರ್ಜಿಯನ್ನು ಹಾಗೂ ಅವರ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-8 ಎಂದು , ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು . ನನ್ನ ತಾಯಿ 10 ಲಕ್ಷ ರೂಪಾಯಿ ಸಾಲ ಪಡೆದ ಕುರಿತಾಗಿ ರಸೀದಿ ಇದೆ ಎಂದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ರಸೀದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -9 ಎಂದು ಗುರುತಿಸಲಾಯಿತು . ಸಾಲದ ಕುರಿತಾಗಿ ಬ್ಯಾಂಕಿಗೆ ಬರೆದುಕೊಟ್ಟ ಆಧಾರ ಪತ್ರ ಎಂದರೆ ಸಾಕ್ಷಿ 8 ವರ್ಷದ ಹಿಂದೆ ಮಾಡಿರುವ ಸಾಲ, ಕಾರಣ ನೆನಪಿಲ್ಲ ಎಂದು ನುಡಿದಿರುತ್ತಾರೆ . ನನ್ನ ತಾಯಿ ಹೆಬ್ಬೆಟ್ಟು ಹಾಕುತ್ತಿದ್ದರು ಕಾರಣ ಅವರ ಸಹಿ ಗುರುತಿಸಲು ಆಗುತ್ತಿಲ್ಲ. ನನ್ನ ತಂದೆ ತಾಯಿಯ ಹೆಸರಲ್ಲಿ ಅಂಕೋಲಾ , ಬಾಸಗೋಡ ಮತ್ತು ಹೊನ್ನೆಬೈಲ್ ಆಸ್ತಿ ಇದೆ ಎಂದರೆ ಸಾಕ್ಷಿ ದೊಡ್ಡಮ್ಮನ ಹೆಸರಿನಲ್ಲಿತ್ತು ಅದು ಇವರ ಹೆಸರಿಗೆ ಟ್ರಾನ್ಸಫರ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ನಾನು ಬ್ಯಾಂಕಿಗೆ ಹೋಗಿ ಯಾರು ಸಾಲ ಮಾಡಿದ್ದಾರೆ , ಯಾವ ಬ್ಯಾಂಕನ ಕುರಿತಾಗಿ ನಾನು ತಿಳಿದುಕೊಂಡಿಲ್ಲ . ಸಾಲದ ಖಾತೆ ನಾನು ಓದಿ ತಿಳಿದುಕೊಂಡಿಲ್ಲ . ಸಾಕ್ಷಿ ದಾಖಲಾತಿಯನ್ನು ನೋಡಿ ತಾಯಿ ಹೆಸರಿನಲ್ಲಿದೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಯಲ್ಲಿ ನನ್ನ ಹೆಸರು ಹಾಗೂ ಸಾಲದ ಖಾತೆ ನಂಬರ ಕೂಡ ಇದೆ ಎಂದರೆ ಸರಿ . ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿ -10 ಎಂದು ಗುರುತಿಸಲಾಯಿತು . ನಾನು ಯಾವುದೇ ದಾಖಲಾತಿಗೆ ಸಹಿ ಹಾಕುವಾಗ ಅದನ್ನು ಓದಿ ನೋಡುತ್ತೇನೆ . ನಾನು ಇಂಗ್ಲೀಷನಲ್ಲಿ ಸಹಿ ಮಾಡುತ್ತೇನೆ . ನನ್ನ , ನನ್ನ ತಾಯಿಯ ವಿರುದ್ಧ ಹಾಗೂ ರಾಜೇಶ ಮುಕುಂದ

ನಾಯ್ಕರವರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಮಲ ಜಾರಿ ಪ್ರಕರಣ ದಾಖಲಾಗಿದೆ ಎಂದರೆ ಗೊತ್ತಿಲ್ಲ . ನನ್ನ ಸಂಬಳದಿಂದ ತಿಂಗಳಿಗೆ 6,840/- ರೂಪಾಯಿ ಕಡಿತಗೊಳ್ಳುತ್ತಿತ್ತು . ಈ ಚೆಕ್ ಕೇಸಿನಲ್ಲಿ ನನ್ನ ಸ್ಯಾಲರಿಯಿಂದ ಹಣ ಕಡಿತಗೊಳ್ಳುತ್ತಿತ್ತು . ಈ ಪ್ರಕರಣದಲ್ಲಿ ಸ್ಯಾಲರಿ ಡಿಡಕ್ಷನ್ ಆಗುತ್ತದೆ ಎಂದು ತೋರಿಸಲು ಯಾವ ದಾಖಲಾತಿ ಇದೆ ಎಂದರೆ ಸಾಕ್ಷಿ ನಾನು ಇದೇ ಪ್ರಕರಣದಲ್ಲಿರುವ ಚೆಕ್ ಗೆ ಚೆಕ್ ನ್ನು ಕೊಟ್ಟಿದ್ದರಿಂದ ಇದೇ ಪ್ರಕರಣದಲ್ಲಿ ನನ್ನ ಸ್ಯಾಲರಿಯಿಂದ ಹಣ ಡಿಡಕ್ಟ ಆಗುತ್ತದೆ ಅಂದುಕೊಂಡಿದ್ದೇನೆ ಹಾಗೂ ಡಿಪೋದಲ್ಲಿ ನನಗೆ ಇನಫಾರಮೇಶನ್ ಕೊಟ್ಟಿದ್ದರು ನೀವು ಚೆಕ್ ಕೊಟ್ಟಿದ್ದರಿಂದ ಡಿಡಕ್ಟ ಆಗುತ್ತದೆ ಎಂದು ಹೇಳಿದ್ದರು . ಆದೇಶ ಪ್ರತಿಯಲ್ಲಿ ಈ ರೀತಿಯಾಗಿ ಹಣ ಡಿಡಕ್ಟ ಆಗಿದೆ ಎಂದರೆ ಗೊತ್ತಿಲ್ಲ . ಡಿಪೋದಲ್ಲಿ ಹೇಳಿದ ಬಗ್ಗೆ ಅವರಿಂದ ದಾಖಲಾತಿಯನ್ನು ಪಡೆದುಕೊಂಡಿಲ್ಲ. ಡಿಪೋದವರನ್ನು ಕೇಳಿ ದಾಖಲಾತಿ ಹಾಜರು ಪಡಿಸಲು ತೊಂದರೆ ಇಲ್ಲ . ಚೆಕ್ ನಲ್ಲಿರುವ ಸಹಿ ನನ್ನದೇ ಆಗಿರುತ್ತದೆ . ನಿಪಿ-6 ರ ಮೇಲಿರುವ ಸಹಿ ನನ್ನದೇ ಎಂದರೆ ಸರಿ . ವಕೀಲರಿಂದ ಬಂದಿರುವ ನೋಟಿಸಿಗೆ ನಾನು ಉತ್ತರ ಕೊಟ್ಟಿಲ್ಲ .

3. ಅಂಕೋಲಾ ನ್ಯಾಯಲಾಯದಲ್ಲಿ ಎಕ್ಸಿಕ್ಯೂಶನ್ 33/2024 ನನ್ನ , ನನ್ನ ತಾಯಿ ಹಾಗೂ ರಾಜೇಶ ಮುಕುಂದ ನಾಯ್ಕ ರವರ ವಿರುದ್ಧ ಅಮಲ ಜಾರಿ ಪ್ರಕರಣ ನಡೆಯುತ್ತಿದೆ ಎಂದರೆ ಸರಿ . ಈ ನ್ಯಾಯಾಲಯದಿಂದ ಸದರಿ ಅಮಲ ಜಾರಿ ಪ್ರಕರಣ ಅಂಕೋಲಾ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದೆ ಎಂದರೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನಾವು ವಕೀಲರನ್ನು ನೇಮಕ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಸಾಲದ ಪಡೆದುಕೊಂಡ ನಂತರ ವರ್ಗಾವಣೆಯಾದಾಗ ಕಟ್ಟಿದ ಹಣ ಬಿಟ್ಟರೆ ಬೇರೆ ಯಾವುದೇ ಹಣವನ್ನು ಕಟ್ಟಿಲ್ಲ ಎಂದರೆ ಸರಿ . ನನ್ನ ತಾಯಿ 2019 ರಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ನೆನಪಿಲ್ಲ . ಇದೇ ಪ್ರಕರಣದಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ನನ್ನ ವಿರುದ್ಧ ಪ್ರೋಕ್ಲೋಮೇಶನ್ ಆಗಿತ್ತು ಎಂದರೆ ಸಾಕ್ಷಿ ನಾನು ಬೆಂಗಳೂರಿನಲ್ಲಿರುವ ಸಮಯದಲ್ಲಿ ಪ್ರೋಕ್ಲೋಮೇಶನ್ ಆಗಿರುತ್ತದೆ ಎಂದು ನುಡಿದಿರುತ್ತಾರೆ . ಈ ಪ್ರಕರಣದಲ್ಲಿ ನಾನು ಹಣವನ್ನು ತುಂಬಿದ ಬಗ್ಗೆ ಯಾವುದೇ ದಾಖಲಾತಿ ಇಲ್ಲ

ಎಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ಸಂಬಳದಲ್ಲಿ ಕಡಿತಗೊಂಡ ಖಾತಾ ಉತಾರ ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ . ನನ್ನ ಸಂಬಳದಿಂದ ಕಡಿತಗೊಂಡ ಖಾತಾ ಉತಾರ ಈ ಕ್ರಿಮಿನಲ್ ಕೇಸ್ ಗೆ ಸಂಬಂಧಪಟ್ಟದ್ದಲ್ಲ ಎಂದರೆ ಸಾಕ್ಷಿ ಲೋನ್ ಗೆ ಸಂಬಂಧಪಟ್ಟಂತೆ ತೆಗೆದುಕೊಂಡಿದ್ದಾರೆ ಎಂದು ನುಡಿದಿರುತ್ತಾರೆ . ಅಂಕೋಲಾದಲ್ಲಿರುವ ಅಮಲ ಜಾರಿ ಪ್ರಕರಣದಲ್ಲಿ ಆಸ್ತಿ ಜಪ್ತಿ ಹಾಗೂ ಅರೆಸ್ಟ ವಾರಂಟ್ ಆಗಿದೆ ಎಂದರೆ ಗೊತ್ತಿಲ್ಲ . ಕೋರ್ಟ ಅಮೀನರು ನಿಮ್ಮ ಮನೆಗೆ ಎಷ್ಟು ಬಾರಿ ಬಂದಿದ್ದರು ಎಂದರೆ ಸಾಕ್ಷಿ ನನಗೆ ಸಿಗಲಿಲ್ಲ ಎಂದು ನುಡಿದಿರುತ್ತಾರೆ . ಕೋರ್ಟ ಅಮೀನರಿಗೆ ನನ್ನ ತಾಯಿ ಜೋರು ಮಾಡಿ ಹೊಡೆದಿರುವ ಬಗ್ಗೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ . ಚೆಕ್ ನ್ನು ಸಾಲ ವಸೂಲಾತಿ ಕುರಿತಾಗಿ ನೀಡಿದ್ದರಿಂದ ನಾನೇ ಅದರಲ್ಲಿರುವ ಹಣವನ್ನು ಕಟ್ಟಲು ಬದ್ಧರು ಎಂದರೆ ಸಾಕ್ಷಿ ನಾನು ಈಗಾಗಲೇ ಹಣ ಕಟ್ಟಿದ್ದೇನೆ ಎಂದು ನುಡಿದಿರುತ್ತಾರೆ . ನಾನು ಬ್ಯಾಂಕಿಗೆ ಚೆಕ್ ನ್ನು ಕೊಟ್ಟು ನನ್ನ ತಾಯಿಯ ಸಾಲದ ವಸೂಲಾತಿಗಾಗಿ ಚೆಕ್ ನ್ನು ಕೊಟ್ಟು ಮೋಸ ಮಾಡಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಈ ಕೇಸಿನಲ್ಲಿ ನಾನು ಯಾವುದೇ ಹಣವನ್ನು ಕೋರ್ಟನಲ್ಲಿ ಕಟ್ಟಿದ್ದಾಗಲೀ ಫಿರ್ಯಾದಿ ಬ್ಯಾಂಕಿನಲ್ಲಿ ಕಟ್ಟಿದ್ದಾಗಲಿ ಎಂದರೆ ಸಾಕ್ಷಿ ನನ್ನ ವೇತದಿಂದ ಕಟ್ ಆಗಿದ್ದರಿಂದ ನನಗೆ ಹಣ ಕಟ್ಟಲು ಸಾಧ್ಯವಾಗಲಿಲ್ಲ ಎಂದು ನುಡಿದಿರುತ್ತಾರೆ .

<u>ಮರು ವಿಚಾರಣೆ :ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.